ಹತ್ತಿರದಿಂದ ನೋಡಬೇಕೆನ್ನುವ ಕುತೂಹಲವನ್ನು ಹತ್ತಿಕ್ಕಲಾಗದೆ ಅದರ ಹತ್ತಿರಕ್ಕೆ ಹೋಗಿದ್ದ. ಹಾಗೆ ಹೋದವನು ಅದನ್ನು ಕಣ್ತುಂಬಿಕೊಂಡ, ಅದನ್ನು ಮುಟ್ಟುವ ತುಡಿತಕ್ಕೆ ಬಿದ್ದ. ಅವನ ಗೆಳೆಯನಿಗೆ ಅದಕ್ಕೆ ಮದ್ದು ತುಂಬಿಸಿ ಇಟ್ಟಿರುವುದು ಗೊತ್ತಿಲ್ಲದ್ದರಿಂದ ಅವನೂ ಅದಕ್ಕೆ ಹೂಗುಟ್ಟಿದ. ಹಂಗೆ ನೋಡುವಾಗ ಕೋವಿಯ ಹಿಡಿಯನ್ನು ನೆಲಕ್ಕಾನಿಸಿಕೊಂಡು ವಕ್ಕಣ್ಣು ಮಾಡಿಕೊಂಡು ನಳಿಕೆಯೊಳಕ್ಕೆ ಕಣ್ಣಿಟ್ಟು ನೋಡತೊಡಗಿದ. ಆಗ ಅವನ ಒಂದು ಬೆರಳು ಗೊತ್ತಿಲ್ಲದೆ ಕೋವಿಯ ಕುದುರೆಯ ಮೇಲಿತ್ತು. ಕುದುರೆಯನ್ನು ಮೀಟಿದರೆ ಮದ್ದು ಸಿಡಿಯುತ್ತದೆ ಎಂಬುದು ಸುತರಾಂ ಗೊತ್ತಿಲ್ಲದಿದ್ದ ಗಾಂಧಿ ಅಕಸ್ಮಾತ್ತಾಗಿ ಕೋವಿಯ ಕುದುರೆಯನ್ನು ಮೀಟಿ ಬಿಟ್ಟ. ಆಗ ಅದರಿಂದ ಬಂದ ಢಂ ಅನ್ನುವ ಸದ್ದಿಗೆ ಹೌಹಾರಿ ಚಕ್ಕನೆ ನಳಿಗೆಯ ಬಾಯಿಂದ ಕಣ್ಣುಗಳನ್ನು ವಾರಾಸೆ ಮಾಡಿಕೊಂಡರೂ ಆ ಹೊತ್ತಿಗಾಗಲೇ ಆ ಮದ್ದಿನ ಸೆರೆಗಳು ಗಾಂಧಿಯ ಕಣ್ಣುಗಳೊಳಕ್ಕೆ ಹೊಕ್ಕು ಅವುಗಳೊಳಗಿನ ಬೆಳಕನ್ನು ಶಾಶ್ವತವಾಗಿ ಇನ್ನಿಲ್ಲದಂತೆ ಮಾಡಿ ಬಿಟ್ಟಿದ್ದವು.

ಹಿಂಗೆ ಶಾಶ್ವತವಾಗಿ ಕುರುಡುತನಕ್ಕೆ ಜಾರಿದ್ದ ಗಾಂಧಿಗೆ ಪಕ್ಷಿಗಳೆಂದರೆ ಜೀವ. ಗಾಂಧಿಯ ಇಂಥ ಪಕ್ಷಿಗಳೆಡೆಗಿನ ಮಮಕಾರ ಕುರುಡನಾದ ಮೇಲೆ ಬಂದದ್ದಲ್ಲ. ತನ್ನ ನಿತ್ಯದ ಸ್ಕೂಲು, ಆಟಪಾಠಗಳ ನಡುವೆ ಬಿಡುವು ಮಾಡಿಕೊಂಡು ಹೊಲದಲ್ಲಿ ತಾನೇ ಖುದ್ದಾಗಿ ಗುಡಿಸಲೊಂದನ್ನು ಕಟ್ಟಿಕೊಂಡಿದ್ದ. ಅದರೊಳಗೆ ಥರಾವರಿ ಪಕ್ಷಿಗಳನ್ನು ಸಾಕುತ್ತಿದ್ದ. ಜೊತೆಗೆ ಮಕ್ಕಳನ್ನೆಲ್ಲಾ ಅಲ್ಲಿಗೆ ಕರಕಂಡು ಹೋಗಿ ಪಕ್ಷಿಗಳನ್ನು ತೋರಿಸುತ್ತಿದ್ದ. ಅಷ್ಟು ಚಿಕ್ಕ ವಯಸ್ಸಿಗೇ ಪಕ್ಷಿಗಳ ಮೇಲಿನ ಗಾಂಧಿಯ ಅಂಥ ಪ್ರೀತಿಗೆ ಅಪ್ಪ ಅಮ್ಮಂದಿರ ಜೊತೆಗೆ ಗೆಳೆಯರಿಗೆಲ್ಲಾ ಅಚ್ಚು ಮೆಚ್ಚಿನವನಾಗಿದ್ದ.

ಇದ್ದೊಬ್ಬ ಮಗ ಇದ್ದಕ್ಕಿದ್ದಂತೆ ಕಣ್ಣುಗಳನ್ನು ಕಳಕಂಡದ್ದು ಗದ್ದಿಗ್ಯಪ್ಪ ಮತ್ತು ಆಜಮ್ಮನ ಬದುಕಿನ ಉತ್ಸಾಹವನ್ನೇ ಕುಂದಿಸಿಬಿಟ್ಟಿತ್ತು. ತಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಆಸ್ಪತ್ರೆಗಳನ್ನು ಎಡತಾಕಿದ್ದರು. ಆ ಎಲ್ಲಾ ಆಸ್ಪತ್ರೆಗಳ ಡಾಕ್ಟರುಗಳ ಮಾತು ಒಂದೇ ಆಗಿರುತ್ತಿತ್ತು: ಯಾವುದೇ ಕಾರಣಕ್ಕೂ ಮತ್ತೆ ಕಣ್ಣು ಬರಲ್ಲ. ನೋಡಲು ಚಂದವಿದ್ದ ಸದಾ ಉತ್ಸಾಹದಿಂದ ಪುಟಿಯುತ್ತಿದ್ದ ಮಗ ಮೂಲೆ ಹಿಡಿದದ್ದು ಗಂಡ ಹೆಂಡಿರ ಕರುಳನ್ನು ಹಿಂಡುತ್ತಿತ್ತು.

ಆದರೆ, ಗಾಂಧಿ ಅದರಿಂದ ಬಲು ಬೇಗ ಹೊರಬಂದವನಂತೆ ಗದ್ದಿಗ್ಯಪ್ಪನಿಗೆ ತನ್ನನ್ನು ಪಕ್ಷಿಗಳ ಗುಡಿಸಲಿರುವ ಹೊಲಕ್ಕೆ ಕರಕಂಡು ಹೋಗುವಂತೆ ಪೀಡಿಸತೊಡಗಿದ್ದ. ಗಾಂಧಿಯ ಒತ್ತಾಯಕ್ಕೆ ಮಣಿದು ಗದ್ದಿಗ್ಯಪ್ಪ ಆಗಾಗ ಅವನನ್ನು ಅಲ್ಲಿಗೆ ಕರೆದೊಯ್ಯುತ್ತಿದ್ದ. ನಂತರದ ದಿನಗಳಲ್ಲಿ ಕೋಲೊಂದರ ಸಹಾಯದಿಂದ ಒಬ್ಬನೇ ತಿರುಗಾಡುವುದನ್ನು ಗಾಂಧಿ ರೂಢಿ ಮಾಡಿಕೊಂಡಿದ್ದ. ಇದರಿಂದ ಗದ್ದಿಗ್ಯಪ್ಪ ಮತ್ತು ಆಜಮ್ಮ ಕೊಂಚ ನಿರಾಳವಾಗಿದ್ದರು. ಮತ್ತೊಂದಿಷ್ಟು ದಿನಗಳು ಕಳೆಯುವುದರೊಳಗೆ ಗಾಂಧಿ ತಾನೊಬ್ಬನೇ ತಾನು ಸಾಕಿದ್ದ ಪಕ್ಷಿಗಳ ಗುಡಿಸಲಿನತ್ತ ಹೋಗುವುದನ್ನು ಸಲೀಸು ಮಾಡಿಕೊಂಡ. ಹಂಗೆ ಹೋಗುವಾಗ ಅವನು ರೈಲು ರಸ್ತೆಯನ್ನು ದಾಟಿಕೊಂಡು ಹೋಗಬೇಕಿತ್ತು. ಆ ಕಾರಣಕ್ಕೆ ಕೆಲವೊಮ್ಮೆ ಗದ್ದಿಗ್ಯಪ್ಪನೇ ಆ ರಸ್ತೆಯನ್ನು ದಾಟಿಸಿ ಬರುತ್ತಿದ್ದ.

ಮುಂದೆ ಎಂದಾದರೊಂದು ದಿನ ಆ ಹೊಲದಲ್ಲಿ ತೆಂಗಿನ ಗಿಡಗಳನ್ನು ಕಟ್ಟಿ ತೋಟ ಮಾಡಬೇಕೆಂದು ಕನಸು ಕಂಡಿದ್ದ ಗದ್ದಿಗ್ಯಪ್ಪ ಗಾಂಧಿ ಹುಟ್ಟಿದ ವರ್ಷವೇ ಅಲ್ಲೊಂದು ಬಾವಿಯನ್ನು ತೋಡಿಸಿದ್ದ. ತಾನು ಅಂದುಕೊಂಡಿದ್ದಕ್ಕಿಂತಲೂ ನೀರು ಚೆನ್ನಾಗಿ ಬಂದದ್ದರಿಂದ ಮತ್ತೊಂದೆರಡು ವರ್ಷ ಕಳೆದ ಮೇಲೆ ಆ ಬಾವಿಗೆ ಕಲ್ಲುಗಳನ್ನು ಕಟ್ಟಿಸಿದ್ದ. ಬೇಸಿಗೆಯಲ್ಲಿ ಕೂಡಾ ತಳ ಕಾಣದ ಆ ಬಾವಿ ಊರ ಪಡ್ಡೆ ಹೈಕಳಿಗೆ ಈಜಾಡುವ ತಾಣವಾಗಿ ಹೋಗಿತ್ತು. ಎಂದಾದರೊಂದು ದಿನ ಹೆಚ್ಚೂ ಕಡಿಮೆ ಆದೀತೆಂಬ ಕಾರಣಕ್ಕೆ ಅದರ ಸುತ್ತಲೂ ಬೇಲಿಯನ್ನು ಹಾಕಿದ್ದ. ಆದರೂ ಅವನ ಕಣ್ಣು ತಪ್ಪಿಸಿ ಹುಡುಗರು ಈಜಾಡುವುದನ್ನು ಮಾತ್ರ ನಿಲ್ಲಿಸಲಾಗಿರಲಿಲ್ಲ. ಆ ಹುಡುಗರ ಜೊತೆ ಆಗಾಗ ಗಾಂಧಿಯೂ ಈಜು ಬೀಳುತ್ತಿದ್ದ. ಕ್ರಮೇಣ ಎಷ್ಟು ಮಾಡಿದರೂ ಅಷ್ಟೇಯಾ ಅಂದುಕೊಂಡಿದ್ದ ಗದ್ದಿಗ್ಯಪ್ಪ ಮತ್ತೆ ಬೇಲಿಯನ್ನು ನೇಪುರ್ಲ ಮಾಡಲು ಹೋಗಿರಲಿಲ್ಲ. ಆ ಬಾವಿಗೆ ಇಳಿಯಲು ಮಣ್ಣಿನ ಮೆಟ್ಟಲುಗಳಿದ್ದುದರಿಂದ ಗಾಂಧಿ ಆ ಮೆಟ್ಟಲುಗಳಲ್ಲಿ ಇಳಿದು ಪಕ್ಷಿಗಳ ತಟ್ಟೆಗಳಿಗೆ ನೀರು ತುಂಬಿಸುತ್ತಿದ್ದ. ಅವತ್ತೊಂದು ದಿನ ಗುಡಿಸಲಿನ ಹತ್ತಿರಕ್ಕೆ ಹೋಗಿದ್ದ ಗಾಂಧಿ ಅಕಸ್ಮಾತ್ತಾಗಿ ಕಾಲು